ಕರ್ನಾಟಕ ವಿಧಾನಸಭೆ

ಗುರುವಾರ 18ನೇ ಏಪ್ರಿಲ್ 2000ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 10-20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ. ವಿ. ವೆಂಕಟಪ್ಪ) ಅವರು,

ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

1. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಿಲುವಳಿ ಸೂಚನೆ ಕೊಟ್ಟಿದ್ದೇವೆ.

ಅಧ್ಯಕ್ಷರು: ನಾನೂ ನೋಡಿದೆ, ಸಿಂಧ್ಯರವರ ಹತ್ತಿರ ಮಾತನಾಡಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಕುಡಿಯುವ ನೀರಿಗೆ ದೊಡ್ಡ ಹಾಹಾಕಾರವಾಗಿದೆ. ವಿಶೇಶವಾಗಿ ಉತ್ತರ ಕರ್ನಾಟಕದಲ್ಲಿ ಬೀದರ್ ಜಿಲ್ಲೆಯ ಐದೂ ಜನ ಶಾಸಕರು ಕುಡಿಯುವ ನೀರಿಗೆ ಬಹಳ ತೊಂದರೆ ಇದೆ ಎಂದು ವಿಚಾರ ಪ್ರಸ್ತಾಪ ಮಾಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಅಷ್ಟೆ ಅಲ್ಲ, ಪಟ್ಟಣ ಪ್ರದೇಶಗಳಲ್ಲಿ ಕೂಡ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ರಾಜ್ಯದಲ್ಲಿ ಕೆಲವು ಕಡೆ ಟ್ಯಾಂಕರ್‌ಗಳ ಮೂಲಕ ನೀರನ್ನು ತೆಗೆದುಕೊಂಡು ಹೋಗುವ ಪರಿಸ್ಥಿತಿ ಉದ್ಭವವಾಗಿದೆ. ಇದು ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗತಕ್ಕಂತಹ ಸನ್ನಿವೇಶ ಬಹಳ ಇರುವುದರಿಂದ ವಿಶೇಷವಾದ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ, ವಿನಂತಿ ಮಾಡುತ್ತೇನೆ. ಸರ್ಕಾರದವರು ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇನ್ನೂ ಕೆಲಸ ಪ್ರಾರಂಭವಾಗಿಲ್ಲ. ಹಣಕ್ಕೆ ಲೆಕ್ಕವಿಲ್ಲ? ಪ್ರತಿ ಹಳ್ಳಿಗೂ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳುತ್ತಾರೆ. ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್‌ಗೆ ಹೇಳಿದರೆ ಇನ್ನು ಏನೂ ಇಲ್ಲ, ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್, ಟೆಕ್ನಿಕಲ್ ಅಪ್ರೂವಲ್, ಫೈನಾನ್ಷಿಯಲ್ ರಿಲೀಸ್ ಇವೆಲ್ಲ ಆಗಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಎಲ್ಲ ಶಾಸಕರೂ ಕೇವಲ ಹಳ್ಳಿಗಳಲ್ಲಿ ಅಷ್ಟೇ ಅಲ್ಲ, ಪಟ್ಟಣ ಪ್ರದೇಶಗಳಲ್ಲಿ ಕೂಡ ಕುಡಿಯುವ ನೀರಿಗೆ ದೊಡ್ಡ ಹಾಹಾಕಾರವಾಗಿದೆ ಎಂದು ಹೇಳಿದ್ದಾರೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗುವುದಕ್ಕೆ ಮುನ್ನ ಇದರ ಬಗ್ಗೆ ತಾವು ನಾಳೆ, ಅಥವಾ ನಾಡಿದ್ದು ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ಮತ್ತು ಪಟ್ಟಣ ಪ್ರದೇಶಕ್ಕೆ ಸಂಬಂಧಪಟ್ಟ ನಾಗರೀಕ ಅಭಿವೃದ್ಧಿ ಮಂತ್ರಿಗಳು ಇಬ್ಬರೂ ಇರತಕ್ಕಂತಹ ಸಂದರ್ಭದಲ್ಲಿ, ಸಾಧ್ಯವಾದರೆ ಮುಖ್ಯಮಂತ್ರಿಗಳಿರುವ ಸಂದರ್ಭದಲ್ಲಿ ವ್ಯಾಪಕವಾದ ಚರ್ಚೆಗೆ ತಾವು ಅವಕಾಶ

ಮಾಡಿಕೊಡಬೇಕು ಜೊತೆಗೆ ಇಡೀ ರಾಜ್ಯದಲ್ಲಿ ಆಡಳಿತ ಪಕ್ಷದವರು ತಮ್ಮ ಕಿರೀಟದ ಮೇಲೆ ಇನ್ನೊಂದು ಕೊಂಬು ಬಂದಿತು ಎಂದು ಅಂದುಕೊಂಡಿದ್ದು, ಗ್ರಾಮ ಪಂಚಾಯಿತಿ ಚುನಾವಣೆ ಮಾಡಿದ್ದೇವೆ ಎಂದು ಹೇಳಿದರು. ಶ್ರೀಮಾನ್ ವೈ.ಕೆ. ರಾಮಯ್ಯನವರ ಭಾಷಣವನ್ನು ತಾವು ಆಲಿಸಿದಿರಿ. ಇನ್ನು ದೇಶದಲ್ಲಿ ಉಳಿದಿರುವುದು ಒಂದೇ ಒಂದು ಕ್ರಾಂತಿ, ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಎಲೆಕ್ಷನ್ ಮಾಡಿ ಬಿಟ್ಟರೆ ಎಲ್ಲ ಕ್ರಾಂತಿ ಆದ ಹಾಗೆ ಎನ್ನುವ ಮಾತನ್ನು ಅವರು ನಮಗೆ ಹೇಳಿಕೊಟ್ಟರು. ಆಡಳಿತ ಪಕ್ಷದವರಿಗೆ ಆಗಲೇ ಅವರ ಕೊರಳಿಗೆ ಹಗ್ಗ ಬರುತ್ತಿದೆ. ಪ್ರಾರಂಭದ ದಿನದಿಂದ ಶ್ರೀಮಾನ್ ಜಗದೀಶ್ ಶೆಟ್ಟರ್‌ರವರು, ಸೋಮಶೇಖರ್‌ರವರು, ಭೈರೇಗೌಡರು, ಎಸ್.ಎಸ್.ಪಾಟೀಲರು, ಮತ್ತು ಡಿ.ವಿ. ಸದಾನಂದಗೌಡರು ನಾವೆಲ್ಲಾ ಹೇಳಿದ್ದೇವೆ. ದಯಮಾಡಿ ಎಲೆಕ್ಷನ್ ಕಮೀಷನ್‌ಗೆ ಇರತಕ್ಕ ಅಧಿಕಾರ ವಿತ್‌ಡ್ರಾ ಮಾಡಲಿಕ್ಕೆ ಹೋಗಬೇಡಿ. ನಿಮ್ಮ ಪಕ್ಷದಲ್ಲಿ ಭಿನ್ನ ಮತ ಹೆಚ್ಚಾಗಲಿಕ್ಕೆ ಇದೇ ಕಾರಣವಾಗುತ್ತದೆ. ನಮಗೆ ತೊಂದರೆಯಾಗುವುದಿಲ್ಲ, ಆಡಳಿತ ಪಕ್ಷದ ಶಾಸಕರಿಗೇ ತೊಂದರೆಯಾಗುತ್ತದೆ.

ಒಂದೊಂದು ಕ್ಷೇತ್ರದಲ್ಲೂ ನೀವು ಮಾಡುತ್ತಿರುವ ರಿಸರ್ವೇಶನ್ ಕ್ರಮ ಸರಿಯಾದುದಲ್ಲ. ನಿಮಗೆ ಯಾರೋ ತಪ್ಪು ಮಾಹಿತಿಯನ್ನು ಹೇಳಿದ್ದಾರೆಂದು ನಾವು ಮುಖ್ಯಮಂತ್ರಿಗಳಿಗೆ ಪರಿ ಪರಿಯಾಗಿ ವಿನಮ್ರತೆಯಿಂದ ಕೇಳಿಕೊಂಡೆವು. ಆದರೆ ನಮ್ಮ ಮಾತಿಗೆ ಬೆಲೆ ಸಿಗಲಿಲ್ಲ. ಅಧ್ಯಕ್ಷರಾದ ನಿಮ್ಮ ಮೇಲೆ ಬಹಳಷ್ಟು ಒತ್ತಡವನ್ನು ತಂದುಬಿಟ್ಟರು. ಅಧ್ಯಕ್ಷರಾದ ನೀವು ಬಿಲ್ ಪಾಸ್ ಮಾಡಿಸಲೇಬೇಕಲ್ಲ ಎಂದು ಹೇಳಿ ವಿರೋಧ ಪಕ್ಷದ 85 ಶಾಸಕರುಗಳು ಧರಣಿಯಲ್ಲಿ ಕುಳಿತಿರುವ ಸಂದರ್ಭದಲ್ಲಿಯೇ ಬಿಲ್‌ನ್ನು ಪಾಸ್ ಮಾಡಿಕೊಂಡಿರಿ. ಮಾನ್ಯ ಘೋರ್ಪಡೆಯವರು ನಾನ್ಯಾಕಪ್ಪ ಮಂತ್ರಿಯಾದೆ ಎಂದು ಹೇಳಿಕೊಳ್ಳುವ ಪರಿಸ್ಥಿತಿ ಅವರಿಗೆ ಬಂದಿದೆ. ಇದರಿಂದ ಆಡಳಿತ ಪಕ್ಷದ ಶಾಸಕರಿಗೂ ಕೂಡ ಬಹಳ ತೊಂದರೆಯಾಗಿಬಿಟ್ಟಿದೆ. ಆದುದರಿಂದ, ಇದರ ಬಗ್ಗೆ ನೀವು ಒಂದು ಅಂತಿಮವನ್ನು ಕಾಣಿಸಬೇಕಾಗುತ್ತದೆ. ನಾನು ಯಾವುದೇ ಕ್ಷೇತ್ರದ ಉದಾಹರಣೆಯನ್ನು ಹೇಳಬಯಸುವುದಿಲ್ಲ. ಬೇಲೂರಿನಿಂದ, ಮುಳುಬಾಗಿಲಿನಿಂದ, ಸಾತನೂರಿನಿಂದ ಹಿಡಿದು ವಿರಾಜಪೇಟೆಯವರೆಗೂ ಈ ರೀತಿಯ ಸಮಸ್ಯೆಯಾಗಿರುವುದು ನಮ್ಮ ಕಣ್ಣಿನ ಮುಂದೆಯೇ ಇದೆ. 27 ಜಿಲ್ಲೆಗಳಲ್ಲೂ ಕೂಡ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳು ಆಗುತ್ತವೆ. ಆಡಳಿತ ಪಕ್ಷದ ಸದಸ್ಯರಿಗೆ ಮುಂದಾಗಬಹುದಾದ ಸಮಸ್ಯೆಯನ್ನು ಅರ್ಥಮಾಡಿಕೊಂಡು ಈಗಲಾದರೂ ಸಿ.ಎಲ್.ಪಿ. ಮೀಟಿಂಗ್‌ನ್ನು ಅವರ ನಾಯಕರು ಕರೆದಾಗ ಈಗಾಗಲೇ ಆಗಿರುವ ಅಮೆಂಡ್‌ಮೆಂಟ್‌ನ್ನು ಮತ್ತೆ ಬದಲಾವಣೆ ಮಾಡಿದರೆ ತಪ್ಪೇನೂ ಆಗುವುದಿಲ್ಲ. ಏಕೆಂದರೆ ಅದು ಇನ್ನೂ ರಾಜ್ಯಪಾಲರ ಅನುಮೋದನೆಗೆ ಹೋಗಿಲ್ಲ. ನಾನವು ರಾಜ್ಯಪಾಲರಿಗೆ ಹಾಲಿ ಮಾಡಲಾಗಿರುವ ಅಮೆಂಡ್‌ಮೆಂಟ್‌ನಿಂದ ಕಾನೂನು ಸುವ್ಯವಸ್ಥೆಗೆ ಪ್ರಾಬ್ಲಮ್ ಆಗುವುದರಿಂದ ನೀವು ಮಧ್ಯೆ ಪ್ರವೇಶಿಸಬೇಕೆಂದು ಕೇಳಿಕೊಂಡಿದ್ದೇವೆ. ಅದಕ್ಕೆ ಕನ್ಸಿಡರ್ ಮಾಡಲಾಗುವುದು ಎನ್ನುವ ಮಾತನ್ನು ಸಹಿತ ಅವರು ಹೇಳಿದ್ದಾರೆ. ಈ ಮಧ್ಯೆ ಈಗಲೂ ಏನು ಕಾಲ ಮಿಂಚಿಲ್ಲವಾದ್ದರಿಂದ ರಾಜ್ಯಪಾಲರಿಗೆ ಕಳುಹಿಸಿರುವ ಬಿಲ್‌ನ್ನು ವಾಪಸ್ ತರಿಸಿಕೊಂಡು ಎಲೆಕ್ಷನ್ ಕಮೀಶನ್‌ಗೆ ಮತ್ತೆ ಅಧಿಕಾರ ಕೊಡುವ ಒಂದು ಅಮೆಂಡ್‌ಮೆಂಟ್‌ನ್ನು ಮಾಡಿ ಈಗ ನಡೆಯುತ್ತಿರುವ ಅಧಿವೇಶನದಲ್ಲಿಯೇ ಎರಡೂ ಸದನಗಳ ಒಪ್ಪಿಗೆಯನ್ನು ನೀವೇ

ಪಡೆಯಬಹುದು. ಇದರಿಂದ ರಾಜ್ಯಕ್ಕೂ ಹಾಗೂ ವಿಕೇಂದ್ರೀಕರಣ ವ್ಯವಸ್ಥೆಗೂ ಅನುಕೂಲವಾಗುತ್ತದೆ. ಇದನ್ನು ಮಾಡುವುದಕ್ಕೆ ನಿಮಗೆ ಆಗಲಿಲ್ಲವೆಂದಿಟ್ಟುಕೊಳ್ಳಿ. ಕಡೇ ಪಕ್ಷ ಬಿಲ್ ಫೇರ್ ಆಗಿರಬೇಕೆನ್ನುವ ದೃಷ್ಟಿಯಿಂದ ಪ್ರಾಕ್ಟಿಕಲ್ ಗೈಡ್‌ಲೈನ್ಸ್‌ನ್ನಾದರೂ ಹೊರಡಿಸಿ ಸಮಾಜದಲ್ಲಿ ಸಂಘರ್ಷವಾಗದ ಹಾಗೆ ನೋಡಿಕೊಳ್ಳಬೇಕು. ಈ ದೃಷ್ಟಿಯಿಂದಲೇ ಇದರ ಬಗ್ಗೆ ಚರ್ಚೆ ಮಾಡಲು ನಾವು ನಿಲುವಳಿ ಸೂಚನೆಯನ್ನು ಕಳುಹಿಸಿರುವುದು. ಅಧ್ಯಕ್ಷರು ಪ್ರಶ್ನೋತ್ತರದ ನಂತರ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕು ಅಥವಾ ಇಂದು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಮೇಲ್ಮನೆಯಲ್ಲಿರುವುದರಿಂದ ನಾಳೆಯೇ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದಾದರೆ ನಾಳೆಯೇ ನಮಗೆ ನಿಲುವಳಿ ಸೂಚನೆಯ ಮೇಲೆ ಮಾತನಾಡಲು ಅವಕಾಶ ಮಾಡಿಕೊಡಿ. ನಾವು ಮತ್ತೊಂದು ನಿಲುವಳಿ ಸೂಚನೆಯನ್ನು ನಾವು ನಿಮಗೆ ಕಳುಹಿಸಿಕೊಡುತ್ತೇವೆ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇಂದು ಕುಡಿಯುವ ನೀರಿನ ಸಮಸ್ಯೆ ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇದೆ. ಈ ಬಗ್ಗೆ ಶಾಸಕರ ಅಭಿಪ್ರಾಯ ಹಾಗೂ ವರದಿಯನ್ನು ನೀವು ತರಿಸಿಕೊಳ್ಳಬೇಕು. ಇದರ ಬಗ್ಗೆ ಜನರು ದಂಗೆ ಏಳುವ ಪರಿಸ್ಥಿತಿಗೆ ಬಂದಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಹೇಳಬೇಕು. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಬಹಳಷ್ಟು ಶಾಸಕರು ಮಾತನಾಡುವವರಿದ್ದಾರೆ. ನಾವು ಇದರ ಬಗ್ಗೆ ನಿಲುವಳಿ ಸೂಚನೆಯನ್ನೂ ಕೂಡ ಈಗಾಗಲೇ ಕಳುಹಿಸಿದ್ದೇವೆ. ಇದರ ಬಗ್ಗೆ ನಿಲುವಳಿ ಸೂಚನೆಯನ್ನು ಕೂಡ ಈಗಾಗಲೇ ಕಳುಹಿಸಿದ್ದೇವೆ. ಇದರ ಬಗ್ಗೆ ಚರ್ಚಿಸಲು ಇಂದೇ ತಾವು ಅವಕಾಶ ಮಾಡಿಕೊಟ್ಟರೂ ಒಳ್ಳೆಯದು. ಗ್ರಾಮೀಣಾಭಿವೃದ್ಧಿ ಸಚಿವರು ಮೇಲ್ಮನೆಯಲ್ಲಿರುವುದರಿಂದ ನಾಳೆಯೇ ಇದಕ್ಕೆ ಅವಕಾಶ ಮಾಡಿಕೊಟ್ಟರೂ ಒಳ್ಳೆಯದು. ಒಟ್ಟಿನಲ್ಲಿ ಈ ಬಗ್ಗೆ ತಾವು ಏನು ತೀರ್ಮಾನ ಮಾಡುತ್ತೀರೋ ಅದಕ್ಕೆ ನಾವು ಬದ್ಧರಾಗಿ ನಡೆದುಕೊಳ್ಳುತ್ತೇವೆ. ಇನ್ನು ರಿಸರ್ವೇಶನ್ ಬಗ್ಗೆ ಅಮೆಂಡ್‌ಮೆಂಟ್ ತಂದಾಗಲೇ ಅದಕ್ಕೆ ನಾವೆಲ್ಲರೂ ಪ್ರತಿಭಟನೆಯನ್ನು ಮಾಡಿದೆವು. ಆದರೆ, ಇವರು ಕೇಳಲಿಲ್ಲವಾದ್ದರಿಂದ ಇಂದು ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲೂ ಇದರ ಬಗ್ಗೆ ಗೊಂದಲವಾಗಿದೆ. ಯಾವ ತಾಲ್ಲೂಕಿನಲ್ಲಿ ರಾಜಕೀಯ ಒತ್ತಡ ಇದೆಯೋ ಅಲ್ಲೆಲ್ಲಾ ಜನರಲ್ ಕ್ಯಾಟಗರಿಗೆ ನಾಲ್ಕು-ನಾಲ್ಕು ಸೀಟ್‌ಗಳನ್ನು ರಿಸರ್ವ್ ಮಾಡಿದ್ದಾರೆ. ಒಂದೇ ತಾಲ್ಲೂಕಿನಲ್ಲಿ ಮಾಡಿದ್ದಾರೆ. ಒಂದೇ ತಾಲ್ಲೂಕಿನಲ್ಲಿ ನಾಲ್ಕೈದು ಸೀಟ್ ರಿಸರ್ವೇಶನ್ ಬರುವುದಿಲ್ಲ. ಒ.ಬಿ.ಸಿ.ಯಲ್ಲಿ ಮಹಿಳಾ ಅಭ್ಯರ್ಥಿ ಮೀಸಲು ಮತ್ತು ಎಸ್.ಸಿ. ಅಭ್ಯರ್ಥಿ ಮೀಸಲು ಒಂದು ತಾಲ್ಲೂಕಿನಲ್ಲಿ ಮಾಡಿದ್ದರೆ ಒಂದು ತಾಲ್ಲೂಕಿನಲ್ಲಿ ಜನರಲ್ ಕ್ಯಾಟಗರಿಗೆ ರಿಸರ್ವೇಶನ್ ಬಂದಿದೆ. ಇದರಿಂದ ರಾಜಕೀಯ ಒತ್ತಡ ಉದ್ಭವವಾಗಿದೆಯೆಂದು ಸ್ಪಷ್ಟವಾಗಿ ನಮಗೆ ಗೊತ್ತಾಗುತ್ತದೆ. ಇದರ ಬಗ್ಗೆ ಕೂಡ ಚರ್ಚೆ ಮಾಡಲು ನಾವು ಸೆಪರೇಟ್ ನೋಟೀಸ್‌ನ್ನು ಕೊಡುತ್ತೇವೆ. ಈ ಎರಡೂ ವಿಷಯಗಳು ಬಹಳ ಮಹತ್ವವಿರುವುದರಿಂದ ಇಂದೇ ನಮಗೆ ಅವಕಾಶ ಮಾಡಿಕೊಟ್ಟರೆ ಬಹಳ ಒಳ್ಳೆಯದು. ಇಂದು ಜನರಿಗೆ ಮೊದಲು ಕುಡಿಯುವ ನೀರಿನ ಸೌಲಭ್ಯವನ್ನು ಮಾಡಿಕೊಡಬೇಕಾದ ಅನಿವಾರ್ಯತೆ ಇದೆ. ಬೇರೆ ಎಲ್ಲಾ ಸೌಲಭ್ಯಗಳಿಗಿಂತ ಕುಡಿಯುವ ನೀರು ಜನರಿಗೆ ಮೊದಲು ಬೇಕಾದ ಸೌಲಭ್ಯ. ಆದುದರಿಂದ ನಾನು ಈಗಾಗಲೇ ಹೇಳಿರುವ ಎರಡು ವಿಷಯಗಳ ಬಗ್ಗೆಯೂ ಕೂಡ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ: ಮಾನ್ಯ ಅಧ್ಯಕ್ಷರೆ, ಇಂದು ಕುಡಿಯುವ ನೀರಿನ ಸಮಸ್ಯೆ ನಮ್ಮ ಕ್ಷೇತ್ರದ ತಾಲ್ಲೂಕುಗಳಲ್ಲಿಯೂ ಹೆಚ್ಚಾಗಿದೆ.

ಅಧ್ಯಕ್ಷರು: ನಿಮ್ಮ ನಾಯಕರು ಈಗಾಗಲೇ ಮಾತನಾಡಿದ್ದಾರೆ. ಎರಡು ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳುವುದಂತೂ ನಿಜ. ಅದನ್ನು ಚರ್ಚೆಗೆ ತೆಗೆದುಕೊಂಡಾಗ ನೀವು ಮಾತನಾಡುವಿರಂತೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್: ಮಾನ್ಯ ಅಧ್ಯಕ್ಷರೆ, ಮೂರು ತಿಂಗಳ ಹಿಂದೆಯೇ ಹುಬ್ಬಳ್ಳಿ-ಧಾರವಾಡದ ಹೊಸ ಕಮೀಶನರ್ ಹಾಗೂ ಇನ್ನಿತರ ಅಧಿಕಾರಿಗಳನ್ನು ಕರೆದು ಹುಬ್ಬಳ್ಳಿ-ಧಾರವಾಡದಲ್ಲಿ ನೀರಿನ ಸಮಸ್ಯೆ ಉಲ್ಬಣವಾಗುತ್ತದೆಯಾದ್ದರಿಂದ ಅದಕ್ಕೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೂ ಕೂಡ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಅಲ್ಲಿ ಯಾವ ಬೋರ್‌ವೆಲ್ ಕೂಡ ವರ್ಕ್ ಮಾಡುತ್ತಿಲ್ಲ. ಇಂದು ಅಲ್ಲಿ ಮುಷ್ಕರ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಇಂದು ನೀರಿನ ವಿತರಣೆ ಕೂಡ ಸರಿಯಾಗಿ ಆಗುತ್ತಿಲ್ಲವಾದ ಕಾರಣ ಇದರ ಬಗ್ಗೆ ಉತ್ತರಿಸಲು ನಗರಾಭಿವೃದ್ಧಿ ಸಚಿವರು ಇರಬೇಕಾದ ಅವಶ್ಯಕತೆ ಇದೆ.

ಅಧ್ಯಕ್ಷರು: ಈಗಾಗಲೇ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರಾದ ಸಿಂಧ್ಯಾರವರು ಏನು ಎರಡು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಅವುಗಳೆರಡೂ ಕೂಡ ಗಂಭಿರವಾದ ವಿಷಯಗಳೇ ಆಗಿವೆ. ನನಗೂ ಕೂಡ ಇದರ ಬಗ್ಗೆ ಮನದಟ್ಟಾಗಿದೆ. ಇವುಗಳಿಗೆ ಉತ್ತರಿಸಲು ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಇರಲೇಬೇಕಾಗುತ್ತದೆ. ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಈಗ ಮೇಲ್ಮನೆಯಲ್ಲಿದ್ದಾರೆ. ನಾವು ಈ ಹಿಂದೆ ಇಲ್ಲಿ ಪಾಸ್ ಮಾಡಿ ಕಳುಹಿಸಿದ ಬಿಲ್ 21ನೇ ತಾರೀಖಿಗೆ ಲ್ಯಾಪ್ಸ್ ಆಗಿಬಿಡುತ್ತದೆ ಆದ ಕಾರಣ ಗ್ರಾಮೀಣಾಭಿವೃದ್ಧಿ ಸಚಿವರು ವಿಧಾನಪರಿಷತ್ತಿನಲ್ಲಿರುವುದರಿಂದ ನಾಳೆ ಈ ಎರಡು ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಸಿ. ಬೈರೇಗೌಡ: ನಾಳೆ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇರಬೇಕಾಗುತ್ತದೆ. ಈ ವಿಚಾರದ ಬಗ್ಗೆ ಇಲಾಖಾ ಮಂತ್ರಿಗಳು ಸೀಮಿತವಾಗಿರತಕ್ಕಂಥ ಉತ್ತರಗಳನ್ನು ಮಾತ್ರ ಕೊಡುವುದರಿಂದ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಕೆಲವು ಮುಖ್ಯವಾದ ತೀರ್ಮಾನಗಳನ್ನು ತೆಗೆದುಕೊಳ್ಳುವ ಬಗ್ಗೆ ಸಭೆಯಲ್ಲಿ ಹೇಳಬೇಕಾದ ಅವಶ್ಯಕತೆ ಇರುವುದರಿಂದ ದಯವಿಟ್ಟು ಮುಖ್ಯಮಂತ್ರಿಗಳ ಇರುವಿಕೆಯನ್ನು ತಾವು ನೋಡಿಕೊಳ್ಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮುಂದುವರಿದಿದೆ. ಹೀಗಿರುವಾಗ ಇಂಥ ವಿಷಯಗಳ ಬಗ್ಗೆ ವಿಶೇಷವಾಗಿ ಒತ್ತು ಕೊಡುವುದಕ್ಕೆ ಅವಕಾಶ ಇದೆ. ಆದರೂ ಕೂಡ ಇಂಥ ವಿಚಾರಗಳ ಬಗ್ಗೆ ಚರ್ಚೆ ಮಾಡಲು ಸರ್ಕಾರ ಸಿದ್ದವಿಲ್ಲವೆನ್ನುವ ಮಾತನ್ನು ನಾನು ಹೇಳುತ್ತಿಲ್ಲ. ಅಧ್ಯಕ್ಷರಾದ ತಾವು ಈ ವಿಷಯಗಳ ಮೇಲೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟರೆ ಸರ್ಕಾರದ ವತಿಯಿಂದ ಯಾವ ರೀತಿಯ ಬಾಧಕವೂ ಇಲ್ಲ. ಆದರೆ ಇದನ್ನು ನಿಲುವಳಿ ಸೂಚನೆ ಮೂಲಕ ಚರ್ಚೆ

ಮಾಡುವುದಕ್ಕೆ ಸಾಧ್ಯವಿದೆಯೇ ಎಂಬ ಬಗ್ಗೆ ತಾವು ಮತ್ತೊಮ್ಮೆ ಪರಿಶೀಲಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಮಾನ್ಯ ಸಿಂಧ್ಯಾರವರು ಮಾತನಾಡುತ್ತಾ ಈಗ ಮಾಡಿರುವ ಮೀಸಲಾತಿಯಿಂದ ಬಹಳ ಗೊಂದಲವಾಗಿರುವುದರಿಂದ ರಾಜ್ಯಪಾಲರಿಂದ ಮಸೂದೆಯನ್ನು ವಾಪಸ್ ತರಿಸಿಕೊಳ್ಳಿ ಎಂದರು. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಒಂದು ತಾಲ್ಲೂಕಿನಲ್ಲಿ ನಾಲ್ಕು-ನಾಲ್ಕು ಸ್ಥಾನಗಳನ್ನು ಮೀಸಲು ಮಾಡಲಾಗಿದೆಯೆಂದರು. ಇದನ್ನು ನಾವು ಮಾಡಿದ್ದಲ್ಲ. ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ. ಈ ಹಿಂದೆ ಮಸೂದೆಯಲ್ಲಿ ಏನು ನಮೂದು ಆಗಿತ್ತೋ ಆ ನಮೂದಾದ ನಿಯಮಗಳ ವ್ಯಾಪ್ತಿಯೊಳಗೇ ಜಿಲ್ಲೆಯನ್ನು ಒಂದು ಮಾಪನಕ್ಕಾಗಿ ಇಟ್ಟುಕೊಂಡು ಅದರ ಮೇಲೆ ನಿರ್ಧಾರವನ್ನು ಮಾಡಿದ್ದಾರೆ. ಅದು ಸರಿಯೋ ಅಥವಾ ತಪ್ಪೋ ಎಂದು ಮುಂದೆ ನೋಡೋಣ. ರಿಸರ್ವೇಶನ್ ಮಾಡುವಾಗ ಜಿಲ್ಲೆಯನ್ನು ಒಂದು ಯೂನಿಟ್ ಆಗಿ ಮಾಡಿರುವುದರಿಂದ ತೊಂದರೆ ಆಗಿದೆ ಎಂದರೆ ಅದನ್ನು ನಮ್ಮ ಸರ್ಕಾರ ಮಾಡಿದ್ದಲ್ಲ. ಇದರ ಬಗ್ಗೆ ಎಲೆಕ್ಷನ್ ಕಮೀಶನ್‌ನವರು ಡೈರೆಕ್ಟ್ ಮಾಡಿದ್ದಾರೆ. ಆದರೆ ಈ ವಿಚಾರವನ್ನು ಚರ್ಚೆ ಮಾಡಬೇಕು ಎಂದು ಏನು ಹೇಳಿದ್ದಾರೆ ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ನಾನು ಹೇಳುವುದು ಇಷ್ಟೆ. ನಾಲ್ಕು-ನಾಲ್ಕು ಸ್ಥಾನಗಳನ್ನು ಸರ್ಕಾರ ರಿಸರ್ವೇಶನ್ ಮಾಡಿಲ್ಲ. ಜಿಲ್ಲಾ ಪಂಚಾಯಿತಿಯನ್ನು ಡಿಸ್ಟ್ರಿಕ್ಟ್ ಯೂನಿಟ್ ಮತ್ತು ತಾಲ್ಲೂಕು ಪಂಚಾಯತಿಯನ್ನು ತಾಲ್ಲೂಕು ಯೂನಿಟ್ ಎಂದು ಮಾಡಲಾಗಿದೆ.

ಅಧ್ಯಕ್ಷರು : ನಾಳೆ ಗ್ರಾಮೀಣಾಭಿವೃದ್ಧಿ ಸಚಿವರು ಬರುವುದರಿಂದ ನಾಳೆಯೇ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮತ್ತು ರಿಸರ್ವೇಶನ್ ಬಗ್ಗೆ ವಿಷಯಗಳನ್ನು ತೆಗೆದುಕೊಳ್ಳೋಣ. ಈಗ ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭಿಸುತ್ತೇನೆ.

2. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಸ್.ಎಸ್.ಪಾಟೀಲ್: ಅಧ್ಯಕ್ಷರೆ, ಬಹಳ ದಿನಗಳ ಮೇಲೆ ನನ್ನದೊಂದು ಪ್ರಶ್ನೆ ಬಂದಿದೆ. ಆದರೆ ಈ ಪ್ರಶ್ನೆ ಸಂಖ್ಯೆ 2514ಕ್ಕೆ ಉತ್ತರವೇ ಬಂದಿಲ್ಲ. ದೇವರ ಮಂತ್ರಿಗಳಿಗೆ ನಾನು ಪ್ರಶ್ನೆ ಹಾಕಿದ್ದೆ. ದೇವರೂ ಇಲ್ಲ, ಆ ಮಂತ್ರಿಗಳು ಇಲ್ಲ.

ಅಧ್ಯಕ್ಷರು: ಅವರು ನನಗೆ ಪತ್ರ ಬರೆದಿದ್ದಾರೆ. ನಾಳೆ ನಿಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

ಡಾ: ಬಿ.ಡಿ. ನಾರಾಯಣಪ್ಪ: ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಪ್ರಶ್ನೆ ಇದೆ.

ಅಧ್ಯಕ್ಷರು: ನಿಮ್ಮ ಪ್ರಶ್ನೆಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ ಎಂದು ಇಲ್ಲಿ ಬರೆದಿದ್ದಾರೆ. ಆ ಇಲಾಖೆಯಿಂದ ಉತ್ತರ ಬರಬೇಕು. ಅದಕ್ಕೋಸ್ಕರ ನಾನು ನಿಮ್ಮ ಪ್ರಶ್ನೆಯನ್ನು ಸ್ಕಿಪ್ ಆನ್ ಮಾಡಿದೆ. ಆ ಇಲಾಖೆಯಿಂದ ಉತ್ತರ ಬಂದಮೇಲೆ ಅದನ್ನು ತೆಗೆದುಕೊಳ್ಳೋಣ.